

# ಸಾ.ರಾ ಅಬೂಬಕ್ಕರ್



ಇವರು ಕ್ರಿ.ಶ 1936 ರಲ್ಲಿ ಕಾಸರಗೋಡಿನಲ್ಲಿ ಜನಿಸಿದರು.

ಇವರು ಚಪ್ಪಲಿಗಳು,ಖೆಡ್ಡಾ, ಪಯಣ,ಅರ್ಧರಾತ್ರಿಯಲ್ಲಿ ಹುಟ್ಟಿದ ಕೂಸು ಎಂಬ ಕಥಾ ಸಂಕಲನಗಳನ್ನು ಚಂದ್ರಗಿರಿಯ ತೀರದಲ್ಲಿ,ಕದನವಿರಾಮ,ವಜ್ರಗಳು,ಸುಳಿಯಲ್ಲಿ ಸಿಕ್ಕವರು,ತಳ ಒಡೆದ ದೋಣಿಯಲ್ಲಿ ಇತ್ಯಾದಿ ಕಾದಂಬರಿಗಳನ್ನು ರಚಿಸಿದರು.ಇವರ ಸಾಹಿತ್ಯ ಸಾಧನೆಗಾಗಿ ಪ್ರತಿಷ್ಠಿತ ನೃಪತುಂಗ ಪ್ರಶಸ್ತಿ ದೊರೆತಿದೆ.




# ಪು.ತಿ.ನರಸಿಂಹಾಚಾರ್ಯ



- ಇವರು ಕ್ರಿ.ಶ 1905 ರಲ್ಲಿ ಮಂಡ್ಯ ಜಿಲ್ಲೆ ಮೇಲುಕೋಟೆಯಲ್ಲಿ ಜನಿಸಿದರು.ಇವರು ಶಬರಿ,ಅಹಲ್ಯೆ,ಗೋಕುಲ ನಿರ್ಗಮನ,ಕವಿ ಮತ್ತು ದೋಣಿಯ ಬಿಯದ,ವಿಕಟಕವಿ ವಿಜಯ,ಹಂಸ ದಮಯಂತಿ ಇತ್ಯಾದಿ ಕೃತಿಗಳನ್ನು ರಚಿಸಿದರು.ಇವರಿಗೆ ಕೇಂದ್ರ ಹಾಗೂ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಮತ್ತು ಕರ್ನಾಟಕ ರಾಜ್ಯ ಸರಕಾರ ಕೊಡಮಾಡುವ ಪಂಪ ಪ್ರಶಸ್ತಿ ದೊರೆತಿವೆ.



# ವಿ.ಕೃ ಗೋಕಾಕ್



- ಇವರು ಕ್ರಿ.ಶ 1909 ರಲ್ಲಿ ಹಾವೇರಿ ಜಿಲ್ಲೆಯ ಸವಣೂರಿನಲ್ಲಿ ಜನಿಸಿದರು.ವಿನಾಯಕ ಎಂಬ ಕಾವ್ಯನಾಮದಿಂದ ಪ್ರಸಿದ್ಧರಾದ ಇವರು ಸಮುದ್ರದಾಚೆಯಿಂದ,ಜೀವನಪಾಠಗಳು,ಭಾರತ ಸಿಂಧು ರಶ್ಮಿ,ಸಮುದ್ರಗೀತೆಗಳು,ಪಯಣ,ಉಗಮ,ಇಜ್ಜೋಡು, ದ್ಯಾವಾಪೃಥಿವೀ,ಸಮರಸವೇ ಜೀವನ ಎಂಬ ಮೊದಲಾದ ಕೃತಿಗಳನ್ನು ರಚಿಸಿದರು.ಇವರಿಗೆ ಜ್ಞಾನಪೀಠ ಪ್ರಶಸ್ತಿ,ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ,ಗೌರವ ಡಾಕ್ಟರೇಟ್ ಪ್ರಶಸ್ತಿ ದೊರೆತಿವೆ.



# ಡಾ.ಡಿ.ಎಸ್ ಜಯಪ್ಪಗೌಡ



ಇವರು ಕ್ರಿ.ಶ 1947 ರಲ್ಲಿ ಜನಿಸಿದರು.

ಇವರು ಚಿಕ್ಕಮಂಗಳೂರು ಜಿಲ್ಲೆ
ಮೂಡಿಗೆರೆ ತಾಲೂಕಿನ
ದಾರದಹಳ್ಳಿಯಲ್ಲಿ ಜನಿಸಿದರು

ಇವರು ದಿವಾನ್ ಸರ್
ಎಂ.ವಿಶ್ವೇಶ್ವರಯ್ಯನವರ
ಕಾರ್ಯಸಾಧನೆಗಳು,ಮೈಸೂರು
ಒಡೆಯರು,ಜನಪದ
ಆಟಗಳು,ಕರ್ನಾಟಕ ಗ್ರಾ

ಮೀಣ ಸಂಸ್ಥೆಗಳು ಮೊದಲಾದ
ಕೃತಿ ರಚಿಸಿದ ಇವರಿಗೆ ಕರ್ನಾಟಕ
ಸಾಹಿತ್ಯ ಅಕಾಡೆಮಿ ಪ್ರಶಸ್ತಿ
ದೊರೆತಿದೆ.




# ದೇವನೂರು ಮಹಾದೇವ



- ಇವರು ಕ್ರಿ.ಶ 1948 ರಲ್ಲಿ ಮೈಸೂರು ಜಿಲ್ಲೆಯ ನಂಜನಗೂಡು ತಾಲೂಕು ದೇವನೂರಿನಲ್ಲಿ ಜನಿಸಿದರು.ಇವರು ಒಡಲಾಳ,ದ್ಯಾವನೂರು,ಗಾಂಧಿ ಮತ್ತು ಮಾವೊ,ನಂಬಿಕೆಯ ನಂಟ,ನೋಡು ಮತ್ತು ಕೂಡು,ಎದೆಗೆ ಬಿದ್ದ ಅಕ್ಷರ ಎಂಬಿತ್ಯಾದಿ ಕೃತಿಗಳನ್ನು ರಚಿಸಿದರು.ಹಾಗೆ ಕುಸುಮಬಾಲೆ ಎಂಬ ಪ್ರಸಿದ್ಧ ಕಾದಂಬರಿ ರಚಿಸಿದ ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ,ಭಾರತೀಯ ಭಾಷಾ ಪ್ರಶಸ್ತಿ ದೊರೆತಿವೆ.




# ಎ.ಎನ್ ಮೂರ್ತಿರಾವ್




ಇವರು ಕ್ರಿ.ಶ 1900 ರಲ್ಲಿ ಮಂಡ್ಯ ಜಿಲ್ಲೆ ಅಕ್ಕಿಹೆಬ್ಬಾಳನಲ್ಲಿ ಜನಿಸಿದರು.

ಇವರು ಹಗಲುಗನಸುಗಳು,ಅಲೆಯುವ ಮನೆ,ಅಪರವಯಸ್ಕನ ಅಮೇರಿಕಾ ಯಾತ್ರೆ,ಮಿನುಗು ಮಿಂಚು,ಪೂರ್ವ ಸೂರಿ ಇತ್ಯಾದಿ ಕೃತಿಗಳನ್ನು ರಚಿಸಿದರು.

ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,ಪಂಪ ಪ್ರಶಸ್ತಿ(ದೇವರು ಕೃತಿಗೆ),ಗೌರವ ಡಿ.ಲಿಟ್ ಪದವಿ ದೊರೆತಿವೆ.





# ದುರ್ಗಸಿಂಹ





ಇವರು ಕ್ರಿ.ಶ 1030 ರಲ್ಲಿ ಜನಿಸಿದರು.

ಇವರು ಗದಗ ಜಿಲ್ಲೆಯ ರೋಣ ತಾಲೂಕಿನ ಸಯ್ಯಡಿಯಲ್ಲಿ ಜನಿಸಿದರು.

ಇವರು ಪಂಚತಂತ್ರ ಎಂಬ ಶ್ರೇಷ್ಠ ಕೃತಿಯನ್ನು ರಚಿಸಿದರು.ಇದು ಐದು ತಂತ್ರಗಳನ್ನು ಹಾಗೂ 48 ಉಪಕಥೆ ಹೊಂದಿದೆ.



# ಜಿ.ಎಸ್ ಶಿವರುದ್ರಪ್ಪ



- ಇವರು ಕ್ರಿ.ಶ 1926 ರಲ್ಲಿ ಶಿವಮೊಗ್ಗ ಜಿಲ್ಲೆ ಶಿಕಾರಿಪುರದಲ್ಲಿ ಜನಿಸಿದರು.

*ಆಧುನಿಕ ಕನ್ನಡ ಪ್ರಮುಖ ಕವಿಯಾದ ಇವರು ಸಾಮಗಾನ,ಚೆಲುವು-ಒಲವು,ದೇವಶಿಲ್ಪಿ,ದೀಪದಹೆಜ್ಜೆ,ಅನಾವರಣ,ವಿಮರ್ಶೆಯ ಪೂರ್ವ ಪಶ್ಚಿಮ,ಮಾಸ್ಕೊದಲ್ಲಿ ಇಪ್ಪತ್ತೆರಡು ದಿನಗಳು,ಸೌಂದರ್ಯ ಸಮೀಕ್ಷೆ ಮೊದಲಾದ ಕೃತಿಗಳನ್ನು ರಚಿಸಿದರು.ಇದಲ್ಲದೇ ಕಾವ್ಯಾರ್ಥ ಚಿಂತನ ಕೃತಿಗೆ ಇವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ,ಇದರೊಟ್ಟಿಗೆ ರಾಷ್ಟ್ರಕವಿ ಅಭಿದಾನ,ಪಂಪ ಪ್ರಶಸ್ತಿ,ಗೌರವ ಡಿ.ಲಿಟ್ ಪದವಿ ದೊರೆತಿದೆ.



# ದ.ರಾ ಬೇಂದ್ರೆ



ದ.ರಾ ಬೇಂದ್ರೆಯವರು ಕ್ರಿ.ಶ 1896 ರಲ್ಲಿ
ಧಾರವಾಡದಲ್ಲಿ ಜನಿಸಿದರು.ಕನ್ನಡ ಸಾಹಿತ್ಯದ
ನವೋದಯದ ಪ್ರಮುಖ ಕವಿ ಇವರು
ಗರಿ,ನಾದಲೀಲೆ,ಉಯ್ಯಾಲೆ,ಸಖೀಗೀತ,ನಾದಲೀಲೆ,ಮೇಘ
ದೂತ,ಗಂಗಾವತರಣ,ಸೂರ್ಯಪಾನ,ನಗೆಯ
ಹೊಗೆ,ಸಾಹಿತ್ಯದ ವಿರಾಟ್ ಸ್ವರೂಪ,ಅರಳು ಮರಳು
ಮೊದಲಾದ ಕೃತಿಗಳನ್ನು ರಚಿಸಿದರು.ಇವರಿಗೆ ಜ್ಞಾನಪೀಠ
ಪ್ರಶಸ್ತಿ,ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,ಪಂಪ ಪ್ರಶಸ್ತಿ
ದೊರೆತಿವೆ.

# ಕುಮಾರವ್ಯಾಸ

ಇವರು ಕ್ರಿ.ಶ 1430 ರಲ್ಲಿ ಗದಗ ಪ್ರಾಂತ್ಯದ ಕೋಳಿವಾಡದಲ್ಲಿ ಜನಿಸಿದರು.

ಕರ್ನಾಟಕ ಭಾರತ ಕಥಾ ಮಂಜರಿ ಹಾಗೂ ಐರಾವತ ಎಂಬುದು ಇವರು ರಚಿಸಿದ ಶ್ರೇಷ್ಠ ಕೃತಿಗಳಾಗಿವೆ.

ಇವರಿಗೆ ರೂಪಕ ಸಾಮ್ರಾಜ್ಯ ಚಕ್ರವರ್ತಿ ಎಂಬ ಬಿರುದು ಇತ್ತು.ಕನ್ನಡ ಸಾಹಿತ್ಯ ಲೋಕದ ಶ್ರೇಷ್ಠ ಕವಿ ಇವರು.



# ಕುವೆಂಪು



- ಇವರು ಕ್ರಿ.ಶ 1904 ಡಿಸೆಂಬರ್ 29 ರಂದು ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲೂಕಿನ ಕುಪ್ಪಳ್ಳಿಯಲ್ಲಿ ಜನಿಸಿದರು.
- ಕೊಳಲು,ಪಾಂಚಜನ್ಯ,ಪ್ರೇಮಕಾಶ್ಮೀರ,ಪಕ್ಷಿಕಾಶಿ ಇವರು ರಚಿಸಿದ ಕವನಸಂಕಲನಗಳು.ಕಾನೂರು ಹೆಗ್ಗಡತಿ,ಮಲೆಗಳಲ್ಲಿ ಮದುಮಗಳು ಇವು ಇವರ ರಚಿತ ಕಾದಂಬರಿಗಳು.ಜಲಗಾರ,ಯಮನಸೋಲು,ಬೆರಳ್ಗೆ ಕೊರಳ್ ಇವು ಇವರು ಬರೆದ ನಾಟಕಗಳು.ಇದಲ್ಲದೇ ಶ್ರೀರಾಮಾಯಣದರ್ಶನಂ ಎಂಬ ಕೃತಿ ಅಮಲನಕಥೆ,ಮೋಡಣ್ಣನ ತಮ್ಮ, ಬೊಮ್ಮನಹಳ್ಳಿ ಕಿಂದರಿಜೋಗಿ ಎಂಬ ಮಕ್ಕಳ ಕಥೆಗಳನ್ನು ಬರೆದ ಇವರಿಗೆ ಜ್ಞಾನಪೀಠ ಪ್ರಶಸ್ತಿ,ಪಂಪ ಪ್ರಶಸ್ತಿ,ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ,ಪದ್ಮ ವಿಭೂಷಣ ಪ್ರಶಸ್ತಿ,ರಾಷ್ಟ್ರ ಕವಿ ಪುರಸ್ಕಾರ,ಗೌರವ ಡಿ.ಲಿಟ್ ಪದವಿ ದೊರೆತಿವೆ.




# ರನ್ನ




ರನ್ನ ಕ್ರಿ.ಶ 949 ರಲ್ಲಿ
ಬಾಗಲಕೋಟೆ ಜಿಲ್ಲೆ
ಮುದುವೊಳಲು
ಎಂಬಲ್ಲಿ ಜನಿಸಿದರು.

ಇವರು ಸಾಹಸಭೀಮ
ವಿಜಯ,ಅಜಿತ ತೀರ್ಥಂಕರ
ಪುರಾಣ
ತಿಲಕಂ,ಪರಶುರಾಮ
ಚರಿತೆಂ,ಚಕ್ರೇಶ್ವರ ಚರಿತಂ
ಎಂಬ ಕೃತಿಗಳನ್ನು
ರಚಿಸಿದರು.ಇವರಿಗೆ
ರತ್ನತ್ರಯ,ಕವಿ ಚಕ್ರವರ್ತಿ
ಎಂಬ ಬಿರುದು ದೊರೆತಿವೆ




# ಲಕ್ಷ್ಮೀಶ




ಕವಿ ಲಕ್ಷ್ಮೀಶ ಕ್ರಿ.ಶ ಸುಮಾರು 1550 ರಲ್ಲಿ ಚಿಕ್ಕಮಂಗಳೂರು ಜಿಲ್ಲೆ ಕಡೂರು ತಾಲೂಕಿನ ದೇವನೂರಿನಲ್ಲಿ ಜನಿಸಿದರು.ಜೈಮಿನಿ ಭಾರತ ಇವರು ರಚಿಸಿದ ಶ್ರೇಷ್ಠ ಕೃತಿ.ಇವರಿಗೆ ಕರ್ಣಾಟ ಕವಿ ಚೂತವನ ಚೈತ್ರ,ಉಪಮಾಲೋಲ ಎಂಬ ಬಿರುದುಗಳನ್ನು ನೀಡಲಾಗಿದೆ.